# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ
## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 03–01–2026** **ಸಮಯ : 2½ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ:** **10x1=10**

1. ಆಧ್ಯಾತ್ಮಿಕತೆಗೆ ________ ಪೀಠಿಕೆ ಯಾಗಿರುತ್ತದೆ.
   (ದೀನತೆ; ಸಮಯ; ಆರೋಗ್ಯ)
2. ಹಿಂದುಳಿದ ಜನರಿಗಾಗಿಯೇ ದುಡಿದ ಮಹಾನ್ ವ್ಯಕ್ತಿ ________.
   (ನೆಲ್ಸನ್ ಮಂಡೇಲಾ; ಮದರ್ ತೆರೇಸಾ; ಅಂಬೇಡ್ಕರ್)
3. ಇಂದು ನಾವು ________ ಸಮಾಜದಲ್ಲಿ ಜೀವಿಸುತ್ತಿದ್ದೇವೆ.
   (ಅನ್ಯಾಯದ; ಧಾರ್ಮಿಕ; ಸಾಂಸ್ಕೃತಿಕ)
4. ಸ್ವಂತ ಮನಸಾಕ್ಷಿಯನ್ನು ಆಲಿಸುತ್ತಾ ಅದಕ್ಕೆ ತಕ್ಕಂತೆ ನಡೆಯುವುದು ________
   (ಸಮಾಜ ಸಂವೇದನಾ ಶೀಲತೆ; ಸ್ವಯಂ ಸಂವೇದನಾಶೀಲತೆ; ಪರ ಸಂವೇದನಾಶೀಲತೆ)
5. ನಗಲು ಸಮಯವಿರಲಿ ಅದು ________ ಸಂಗೀತ.
   (ಹೃದಯದ; ಸುಜ್ಞಾನದ; ಸಂತೋಷದ)
6. ಮದರ್ ತೆರೇಸಾರವರು ________ ಎಂದು ಪ್ರಖ್ಯಾತರಾಗಿದ್ದಾರೆ.
   (ಶಿಕ್ಷಕರು; ಸಾಮಾಜಿಕ ಹೋರಾಟಗಾರರು; ಜೀವಂತ ಸಂತರು)
7. ಇಡೀ ಲೋಕವೇ ಹೊರಗೆ ಹೋದಾಗ ________ ಒಬ್ಬನು ಒಳಗೆ ಬರುತ್ತಾನೆ.
   (ಗೆಳೆಯನಾದ; ಒಡಹುಟ್ಟಿದ; ಮುಖಂಡ)
8. ಭಾಷೆ, ಕಲೆ, ಕಟ್ಟುಪಾಡು, ಸಂಪ್ರದಾಯ ಇತ್ಯಾದಿಗಳನ್ನು ಪಾಲಿಸುವ ಹಕ್ಕುಗಳು ______
   (ಧಾರ್ಮಿಕ ಹಕ್ಕು; ಸಾಂಸ್ಕೃತಿಕ ಹಕ್ಕು; ರಾಜಕೀಯ ಹಕ್ಕು)
9. ಇವುಗಳಲ್ಲಿ ಯಾವುದು ಮುಖಂಡತ್ವದ ಲಕ್ಷಣ ಅಲ್ಲ ________
   (ಹಾಸ್ಯ ಪ್ರವೃತಿ; ಸಹನೆ; ಸ್ವ ನಿರ್ಧಾರ)
10. ನಾವು ಗುಂಪು ಮತ್ತು ಸಮಾಜಗಳ ಬಹುರೂಪಿತನವನ್ನು ಅಂಗೀಕರಿಸಿದಾಗ ______ ಅರಳುತ್ತದೆ.
    (ವೈವಿಧ್ಯತೆ; ಸಹೋದರತ್ವ; ಮಾನವ ಘನತೆ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ: 5x1=5**

1. ಮಾನವ ಜೀವಿಗೆ ಘನತೆಯಿಂದ ಜೀವಿಸಲು ________ ಅಗತ್ಯ.
2. ____________ ಸಂತೋಷ ಮತ್ತು ಆರೋಗ್ಯಕರ ಜೀವನದ ಕೀಲಿಯಾಗಿದೆ.
3. __________ ಮುಖಾಂತರ ಒಬ್ಬ ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುತ್ತಾನೆ.
4. ಸರಿ ಮತ್ತು ತಪ್ಪುಗಳನ್ನು ಕಂಡುಕೊಳ್ಳುವ ನಿಪುಣತೆಯೇ ____________.
5. ಅಹಂ ವರ್ಜಿಸಲು ಅತಿ ಕನಿಷ್ಠ ಹಾಗೂ ಮುಖ್ಯವಾದ ಪದ ____________.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ಮಾತನಾಡುವ ಮೊದಲು : ಆಲಿಸು :: ಖರ್ಚು ಮಾಡುವ ಮೊದಲು: __________
2. ಕೆಲಸಕ್ಕೆ ಸಮಯವಿರಲಿ : ಯಶಸ್ಸಿನ ಬೆಲೆ :: ಯೋಚಿಸಲು ಸಮಯವಿರಲಿ : ______
3. ಠಾಗೋರ್ : ಶಾಂತಿ ನಿಕೇತನ :: ಮದರ್ ತೆರೇಸಾ : __________.
4. ಅತ್ಯುತ್ತಮ ಆಚರಣೆ : ದೀನತೆ :: ಅತ್ಯುತ್ತಮ ಭದ್ರತೆ : ____________.
5. ನಿಮಿಷಕ್ಕೆ ಬೆಲೆ : ಬಸ್ಸು ತಪ್ಪಿ ಹೋದ ಪ್ರಯಾಣಿಕ :: ದಿನಕ್ಕೆ ಬೆಲೆ : __________.

**IV. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಸಾಮಾಜಿಕ ಪರಿಜ್ಞಾನ ಎಂದರೇನು?
2. ಸಂವೇದನಾಶೀಲತೆಯ ಹಂತಗಳು ಯಾವುವು?
3. ಗೆಳೆತನವನ್ನು ಹೇಗೆ ಬೆಳೆಸಿಕೊಳ್ಳುತ್ತಿ?
4. ಪ್ರಬುದ್ಧ ಮುಖಂಡನ ಗುಣಲಕ್ಷಣಗಳು ಯಾವುವು?
5. ಮಾನವ ಘನತೆಯನ್ನು ನಾಶಮಾಡುವ ಅಂಶಗಳು ಯಾವುವು?

**V. ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. "ದೀನತೆಯೇ ಸುಗುಣ" ಎನ್ನಲು 2 ಕಾರಣ ಕೊಡಿ.
2. ಪರ ಸಂವೇದನಾಶೀಲತೆಯನ್ನು ಉದಾಹರಣೆಯೊಂದಿಗೆ ವಿವರಿಸಿ.
3. ಸಾಮಾಜಿಕ ಪರಿವರ್ತನೆಯಲ್ಲಿ ತಲ್ಲೀನನಾಗಿರುವ ಮುಖಂಡರಲ್ಲಿ ಇರಬೇಕಾದ ನಾಲ್ಕು ಸ್ವಾಭಾವಿಕ ಚಿಹ್ನೆಗಳು ಯಾವುವು?
4. ಸಾಮಾಜಿಕ ಹಕ್ಕುಗಳು ಎಂದರೇನು?
5. ಸಮಯದ ಉಪಯುಕ್ತ ಬಳಕೆಯನ್ನು ಹೇಗೆ ಮಾಡಬಹುದು?
6. ಡಾ. ಅಂಬೇಡ್ಕರ್‌ರವರಿಗೆ ದಲಿತರ ವಿಮೋಚನೆಗಾಗಿ ಸಮರ್ಪಣಾ ಭಾವದಿಂದ ದುಡಿಯಲು ಪ್ರಚೋದಿಸಿದ ಘಟನೆ ಯಾವುದು?

**VI. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

1. ಸಾಮಾಜಿಕ ಪರಿಜ್ಞಾನದ ತೋರಿಕೆಗಳು ಯಾವುವು?
2. ಮಾನವ ಹಕ್ಕುಗಳ ಗುಣಲಕ್ಷಣಗಳನ್ನು ವಿವರಿಸಿ.

3. ಗೆಳೆತನ ಕಾಪಾಡುವ ಸೂತ್ರಗಳು ಯಾವುವು?
4. ಒಬ್ಬ ಪರಿಣಾಮಕಾರಿ ಮುಖಂಡನಾಗ ಬೇಕಾದರೆ ಅವನು ಯಾವ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು?
5. ನಮ್ಮ ದೈನಂದಿನ ಜೀವನದಲ್ಲಿ ದೀನತೆಯನ್ನು ಹೇಗೆ ಕ್ರಿಯಾತ್ಮಕವಾಗಿ ಅನುಸರಿಸಬಹುದು?
6. "ಉದ್ಯಾನವನದಂತೆ ಮಾನವರು ಬಹುರೂಪಿಗಳು" ಎಂಬ ಹೇಳಿಕೆಯನ್ನು ವಿವರಿಸಿ.
7. ಪ್ರೇರಿತ ಜನನ ಎಂದರೇನು? ಇದನ್ನು ಯಾವುದಾದರೂ ಒಬ್ಬ ಮಹಾಪುರುಷನ ಜೀವನ ಚರಿತ್ರೆಯೊಂದಿಗೆ ವಿವರಿಸು.

**VII. ಯಾವುದಾದರೂ ಒಂದು ವಿಷಯದ ಬಗ್ಗೆ ವಿವರಿಸಿ ಬರೆಯಿರಿ: 1x5=5**

1. ವಿದ್ಯೆಯೇ ಆಸ್ತಿ.
2. ನನ್ನ ಗೆಳೆಯ ನನ್ನ ಭವಿಷ್ಯ
3. ಜೀವನದ ಮಹಾ ಗುರು ಸಮಯ.

**VIII. ಯಾವುದಾದರೂ ಎರಡು ಪ್ರಶ್ನೆಗಳಿಗೆ ನಿಮ್ಮ ಸ್ವಂತ ವಾಕ್ಯಗಳಲ್ಲಿ ಉತ್ತರಿಸಿ: 2x5=10**

1. ಏಕತೆಯೇ ಶಕ್ತಿ ವಿಭಜನೆಯೇ ದುರ್ಬಲತೆ.
2. ಸ್ವಾಭಿಮಾನ ಅತ್ಯುತ್ತಮ ಮೌಲ್ಯ.
3. ಆತ್ಮವಿಶ್ವಾಸ ಯಶಸ್ಸಿನ ಕೀಲಿ.

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಒಂದು ದಿನ ಶಾಲೆಯಲ್ಲಿ ಸ್ವಚ್ಛತಾ ದಿನವನ್ನು ಆಚರಿಸಲಾಯಿತು. ಎಲ್ಲಾ ವಿದ್ಯಾರ್ಥಿಗಳಿಗೆ ಶಾಲಾ ಆಟದ ಮೈದಾನವನ್ನು ಸ್ವಚ್ಛಗೊಳಿಸುವ ಜವಾಬ್ದಾರಿಯನ್ನು ನೀಡಲಾಯಿತು. ವಿದ್ಯಾರ್ಥಿಗಳನ್ನು ಎರಡು ಗುಂಪಿನಲ್ಲಿ ವಿಂಗಡಿಸಿ ಒಂದು ಗುಂಪಿಗೆ ರಮೇಶ್ ಇನ್ನೊಂದು ಗುಂಪಿಗೆ ಆಕಾಶ್ ನಾಯಕತ್ವವನ್ನು ವಹಿಸಿದರು. ಆಕಾಶನ ಗುಂಪು ಬಹಳ ಉತ್ಸಾಹದಿಂದ ಕೆಲಸವನ್ನು ಪ್ರಾರಂಭಿಸಿತು. ಅವರು ಎಲೆಗಳನ್ನು, ಕಾಗದ, ಪ್ಲಾಸ್ಟಿಕ್‌ಗಳನ್ನು, ಕಸ ಕಡ್ಡಿಗಳನ್ನು ಹೆಕ್ಕಿ ಕಸದ ತೊಟ್ಟಿಗೆ ಹಾಕಿದರು. ರಮೇಶನ ಗುಂಪಿನವರು ಕೆಲಸದಲ್ಲಿ ಆಲಸಿತನ ತೋರಿಸಿದರು. ಆದರೂ ಆಕಾಶ್ ಗುಂಪಿನ ಉತ್ತಮ ಕೆಲಸದಿಂದ ಶಾಲಾ ಆಟದ ಮೈದಾನ ಸ್ವಚ್ಛವಾಯಿತು. ಇದನ್ನು ಕಂಡ ಶಿಕ್ಷಕರು ಮಕ್ಕಳ ಶ್ರಮವನ್ನು ಮೆಚ್ಚಿದರು. ಶಾಲಾ ಮುಖ್ಯೋಪಾಧ್ಯಾಯರು 'ನಮ್ಮ ಪರಿಸರವನ್ನು ಸದಾ ಸ್ವಚ್ಛವಾಗಿಟ್ಟುಕೊಳ್ಳೋಣ' ಎಂದು ಕರೆ ನೀಡಿದರು.

   **a. i)** **ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಯಾವ ಜವಾಬ್ದಾರಿಯನ್ನು ನೀಡಲಾಯಿತು?**

   **ii)** **ರಮೇಶನ ನಾಯಕತ್ವದಲ್ಲಿ ಇರುವ ಕೊರತೆ ಏನು?**

   **b. i)** **ಯಾರ ನೇತೃತ್ವದ ಗುಂಪಿನ ಕೆಲಸವನ್ನು ನೀವು ಮೆಚ್ಚುತ್ತೀರಿ?**

   **ii)** **ಏಕೆ?**

c. i) ಈ ರೀತಿಯ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ಯಾವ ಗುಣಗಳು ಬೆಳೆಯುತ್ತವೆ?

ii) ನಮ್ಮ ಪರಿಸರವನ್ನು ನಾವು ಹೇಗೆ ಶುಚಿಯಾಗಿಟ್ಟುಕೊಳ್ಳಬಹುದು?

2. ಕಿರಣ್ ಮತ್ತು ವರುಣ್ ಒಂದೇ ತರಗತಿಯಲ್ಲಿ ಕಲಿಯುತ್ತಿದ್ದರು. ಕಿರಣ್ ಸ್ವಲ್ಪ ಉತ್ತಮವಾಗಿ ಕಲಿಯುತ್ತಿದ್ದರೆ ವರುಣ್ ಸ್ವಲ್ಪ ಉದಾಸೀನ ಮಾಡುತ್ತಿದ್ದ. ಒಂದು ದಿನ ವರುಣ್ ತನ್ನ ಗೆಳೆಯನನ್ನು ಕರೆದು ಇವತ್ತು ನಾವು ಶಾಲೆಗೆ ಹೋಗುವುದು ಬೇಡ ನನ್ನಲ್ಲಿ ಹಣವಿದೆ ಎಲ್ಲಿಯಾದರೂ ಹೋಗೋಣ ಎಂದನು. ಕಿರಣ್ ಮೊದಲು ಬೇಡ ಎಂದರೂ ನಂತರ ಅವನ ಜೊತೆಗೆ ಹೋದನು. ಹೀಗೆ ಎರಡು ಮೂರು ಸಲ ಶಾಲೆಗೆ ಹೋಗದೆ ತಿರುಗಾಡುತ್ತಿದ್ದರು. ಈ ವಿಷಯ ಶಿಕ್ಷಕರಿಗೆ ತಿಳಿದು, ಮನೆಗೆ ವಿಷಯವನ್ನು ತಿಳಿಸಿದರು. ಮನೆಯವರು ಬಂದು ವಿಚಾರಿಸಿದರು. ಇನ್ನೆಂದೂ ಇಂತಹ ತಪ್ಪನ್ನು ಮಾಡುವುದಿಲ್ಲ ನಮ್ಮ ತಪ್ಪನ್ನು ಕ್ಷಮಿಸಿ ಎಂದು ಅವರು ಬೇಡಿಕೊಂಡರು.

a. i) ಕಿರಣ್ ಮತ್ತು ವರುಣ್ ಮಾಡಿದ್ದು ಸರಿಯೇ?

ii) ಏಕೆ?

b. i) ಕಿರಣ್ ಸ್ಥಾನದಲ್ಲಿ ನೀನು ಇರುತ್ತಿದ್ದರೆ ಏನು ಮಾಡುತ್ತಿದ್ದಿ?

ii) ಮೊದಲು ಅವರಿಗೆ ತಪ್ಪಿನ ಅರಿವಾಗದಿರಲು ಕಾರಣವೇನು?

c. i) ನಿಮ್ಮ ಶಾಲೆಯ ಇತರ ಮಕ್ಕಳು ಈ ರೀತಿ ಮಾಡುತ್ತಿದ್ದರೆ ಅವರಿಗೆ ನೀನು ನೀಡುವ ಸಲಹೆ ಏನು?

ii) ಕಿರಣ್ ಮತ್ತು ವರುಣನಿಗೆ ತಮ್ಮ ತಪ್ಪಿನ ಅರಿವಾದದ್ದು ಹೇಗೆ?

3. ಚರಣ್ ತನ್ನ ಗಾಡಿಯಲ್ಲಿ ಸಂಬಂಧಿಕರೊಂದಿಗೆ ದೂರದ ಊರಿಗೆ ಪ್ರವಾಸಕ್ಕೆ ಹೋಗಿರುತ್ತಾನೆ. ದಾರಿ ಮಧ್ಯೆ ಹಸಿವು ನೀಗಿಸಲು ಹೋಟೆಲ್ ಮುಂದುಗಡೆ ಗಾಡಿಯನ್ನು ನಿಲ್ಲಿಸಲು ಬಯಸುತ್ತಾನೆ. ಗಾಡಿ ಹಿಂದಕ್ಕೆ ಚಲಿಸುವಾಗ ಪಾದಚಾರಿ ಒಬ್ಬನಿಗೆ ಡಿಕ್ಕಿ ಹೊಡೆದು ತೀವ್ರ ಗಾಯವಾಗುತ್ತದೆ. ಅದನ್ನು ಕಂಡು ಹೆದರಿ ಚರಣ್ ಗಾಡಿ ನಿಲ್ಲಿಸದೆ ಮುಂದಕ್ಕೆ ಹೋಗುತ್ತಾನೆ.

a. i) ಚರಣ್ ಈ ರೀತಿ ಮಾಡಿದ್ದು ಸರಿಯೇ?

ii) ಏಕೆ?

b. i) ಘಟನೆಯ ಸ್ಥಳದಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದೀರಿ?

ii) ಚರಣ್ ಆ ಸಂದರ್ಭದಲ್ಲಿ ಏನು ಮಾಡಬೇಕಾಗಿತ್ತು?

c. i) ಚರಣ್ ಗಾಡಿ ನಿಲ್ಲಿಸದಿರಲು ಕಾರಣವೇನು?

ii) ಚರಣ್‌ನಲ್ಲಿ ಯಾವ ಮೌಲ್ಯದ ಕೊರತೆ ಇದೆ?